ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ ಹಾನಗಲ್

ಸಿ. ಸಿ. ನಂ. 151/2023

| | | | |
|---|---|---|---|
| ಸಾಕ್ಷಿಧಾರರ ಹೆಸರು | : ಶಶಿಕಲಾ ಎಸ್ | ಪಿಡಬ್ಲ್ಯೂ | 3 |
| ತಂದೆಃಗಂಡನ ಹೆಸರು | : ಸೂರಪ್ಪ | ಸಿಡಬ್ಲ್ಯೂ | 4 |
| ವಯಸ್ಸು | : 35 ವರ್ಷ | | |
| ಉದ್ಯೋಗ | : ಮಹಿಳಾ ಅಬಕಾರಿ ರಕ್ಷಕಿ | | |
| ವಾಸಸ್ಥಳ | : ಚಿತ್ರದುರ್ಗ | | |

ದಿನಾಂಕ 23-07-2023 ರಂದು ಸಾಕ್ಷಿಧಾರರಿಗೆ ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆಃ ಸಹಾಯಕ ಸರಕಾರಿ ಅಭಿಯೋಜಕರಿಂದ

ದಿನಾಂಕ 29.06.2019 ರಿಂದ 28.12.2022 ರಲ್ಲಿಯವರೆಗೆ ನಾನು ಹಾನಗಲ್ ಅಬಕಾರಿ ವಲಯದಲ್ಲಿ ಮಹಿಳಾ ಅಬಕಾರಿ ಪೇದೆಯಾಗಿ ಕರ್ತವ್ಯ ನಿರ್ವಹಿಸಿದ್ದೇನೆ.

2. ದಿನಾಂಕ 20.09.2022 ರಂದು ಜಿಲ್ಲಾಧಿಕಾರಿ ಹಾವೇರಿ ಜಿಲ್ಲೆ ಹಾವೇರವರ ಆದೇಶ ಸಂಖ್ಯೆ ಎಂಎಜಿ/ವಹಿ130/2022-23 ದಿನಾಂಕ 30.08.2022 ರಂತೆ ಗಣೇಶ ವಿಸರ್ಜನೆ ನಿಮಿತ್ತ ಹಾನಗಲ್ಲ ಶಹರದಲ್ಲಿ ಮದ್ಯ ಮಾರಾಟ ನಿಷೇದ ಆದೇಶ ಹಿನ್ನೇಲೆಯಲ್ಲಿ ಚಾಸಾ-1 ಹಾಗೂ ವಲಯ ಕಚೇರಿಯ ಅಬಕಾರಿ ಪೇದೆಗಳಾದ ನಾನು ಮತ್ತು ಚಾಸಾ-5 ರವರೊಂದಿಗೆ ಮದ್ಯಾಹ್ಞ 12.00 ಗಂಟೆ ಸುಮಾರಿಗೆ ಹಾನಗಲ್ಲ ತಾಲೂಕಿನ ಮಲ್ಲಿಗಾರ ಗ್ರಾಮದ ಮುಖ್ಯ ರಸ್ತೆಯಲ್ಲಿ ಗಸ್ತು ನಡೆಸುತ್ತಿದ್ದಾಗ ಮದ್ಯಾಹ್ಞ 12.10 ಗಂಟೆಗೆ ಚಾಸಾ-1 ರವರಿಗೆ ದೂರವಾಣಿ ಮೂಲಕ ಹಾನಗಲ್ಲ-ತಡಸ ರಾಜ್ಯ ಹೆದ್ದಾರಿ 1 ಪಕ್ಕದಲ್ಲಿರುವ ನ್ಯೂ ಶ್ರೀ ರೇಣುಕಾ ಡಾಬಾದಲ್ಲಿ ವಿಶಾಲ ಅಶೋಕ ಕಲಾಲ ಎಂಬುವವರು ಅಕ್ರಮವಾಗಿ ಮದ್ಯ ಮತ್ತು ಬಿಯರ್ ಸಂಗ್ರಹಿಸಿದ್ದಾರೆ ಎಂದು ಖಚಿತ ಮಾಹಿತಿ ಬಂತು. ಸದರಿ ಮಾಹಿತಿಯನ್ನು ನಮಗೆ ತಿಳಿಸಿ ಸ್ಥಳೀಯ ಪಂಚರಿಗೆ ಹುಡಕಲಾಗಿ ಮಲ್ಲಿಗಾರ ಮುಖ್ಯ ರಸ್ತೆಯಲ್ಲಿ ನಿಂತಿದ್ದ ಚಾಸಾ-2 ಮತ್ತು 3 ರವರಿಗೆ ಬಂದ ಮಾಹಿತಿಯನ್ನು ತಿಳಿಸಿ ಪಂಚರಾಗಿ ಸಹಕರಿಸುವಂತೆ ಕೋರಿಕೊಂಡ ಮೇರೆಗೆ ಅವರು ಒಪ್ಪಿಕೊಂಡ ಕಾರಣ ಅವರೊಂದಿಗೆ ಮತ್ತು ಚಾಸಾ-1 ಮತ್ತು 5 ರರವರೊಂದಿಗೆ ಇಲಾಖಾ ವಾಹನದಲ್ಲಿ ತಡಸ ಮಾರ್ಗದಲ್ಲಿ ಸುಮಾರು 1 ಕಿ ಮೀ ಸಾಗಿ ರಾಜ್ಯ ಹೆದ್ದಾರಿ ಪಕ್ಕದಲ್ಲಿದ್ದ ಡಾಬಾದ ಎದುರಿಗೆ ಮದ್ಯಾಹ್ಞ ಸುಮಾರು 12.20 ಗಂಟೆಗೆ ವಾಹನವನ್ನು ನಿಲ್ಲಿಸಲಾಗಿ ಇಲಾಖಾ ವಾಹನವನ್ನು ನೋಡಿ

ಡಾಬಾದ ಎದುರಿಗೆ ನಿಂತಿದ್ದ ಹಳದಿ ಬಣ್ಣದ ಟೀ ಶರ್ಟ್ ಮತ್ತು ಕಪ್ಪು ಬಣ್ಣದ ಪ್ಯಾಂಟ್ ಧರಿಸಿದ್ದ ಸುಮಾರು 6 ಅಡಿ ಎತ್ತರ ಗೋ ಮೈ ಬಣ್ಣದ ಸಾದಾರಣ ಮೈಕಟ್ಟಿನ ಒಬ್ಬ ವ್ಯಕ್ತಿಯು ನಮ್ಮನ್ನು ನೋಡಿ ಡಾಬಾದ ಬಲಭಾಗದ ಮೂಲಕ ಓಡಿ ಹೋದ. ಆತನನ್ನು ಹಿಡಿಯಲು ನಾವು ಪ್ರಯತ್ನಿಸಿದಾಗ ಆತ ಸಿಗಲಿಲ್ಲ. ನಂತರ ಪಂಚರು ಮತ್ತು ಸಿಬ್ಬಂದಿಗಳೊಂದಿಗೆ ಸದರಿ ಡಾಬಾದ ಹತ್ತೀರ ಹೋಗಿ ಬಾಗಿಲು ತೆರೆದಿದ್ದು ಡಾಬಾವನ್ನು ಪರಿಶೀಲಿಸಲು ನ್ಯಾಯಾಲಯದಿಂದ ಶೋಧನಾ ವಾರಂಟನ್ನು ಪಡೆಯಲು ಸಮಯದ ಅಭಾವ ಇದ್ದ ಕಾರಣ ಸ್ಥಳದಲ್ಲಿಯೇ ಪಂಚರ ಸಮಕ್ಷಮ ಶೋಧನಾ ಸಮೂಚಿತ ಆಧಾರವರನ್ನು ತಯಾರಿಸಿ ಸದರಿ ಡಾಬಾವನ್ನು ಶೋಧಿಸಿದಾಗ ಡಾಬಾದ ಪ್ರವೇಶ ದ್ವಾರದ ಎಡಭಾಗದಲ್ಲಿ ಕ್ಯಾಶ್ ಕೌಂಟರ್ ಇದ್ದು ಅದರ ಪಕ್ಕದಲ್ಲಿ ಒಂದು ಬಿಳಿ ಬಣ್ಣದ ಪ್ಲಾಸ್ಟಿಕ ಚೀಲ ಇದ್ದು ಅದನ್ನು ಹೋರ ತೆಗೆದು ಪರಿಶೀಲಿಸಲಾಗಿ ಅದರಲ್ಲಿ ತಲಾ 90 ಎಂ ಎಲ್ ನ ಒಟ್ಟು 22 ಓರಿಜಿನಲ್ ಚಾಯ್ಸು ಟೆಟ್ರಾ ಪ್ಯಾಕಗಳು, ತಲಾ 90 ಎಂ ಎಲ್ ಒಟ್ಟು 12 ಓಲ್ಡ ಟಾವೆರನ್ ಟೆಟ್ರಾ ಪ್ಯಾಕಗಳು, ತಲಾ 650 ಎಂ ಎಲ್ ಒಟ್ಟು 14 ಟೋಬರ್ಗ್ ಬಿಯರ್ ನ ಬಾಟಲಿಗಳು, ತಲಾ 330 ಮೀ. 4 ನಾಕ್ ಔಟ್ ಹೈ ಪಂಚ್ ಬಿಯರ ಕ್ಯಾನಗಳು ಪತ್ತೇ ಆದವು. ಅವುಗಳಿಂದ ಒಟ್ಟು 3.06 ಲೀ ಮಧ್ಯ ಹಾಗೂ 11.08 ಲೀ ಬಿಯರ್ ಇರುವುದು ಕಂಡು ಬಂತು. ಪಂಚರ ಸಮಕ್ಷಮ ಮುದ್ದೆ ಮಾಲನ್ನು ಇಲಾಖಾ ವಶಕ್ಕೆ ಪಡೆದು ಓಡಿ ಹೋದ ವ್ಯಕ್ತಿಯ ವಿರುದ್ಧ ಪ್ರಕರಣವನ್ನು ದಾಖಲಿಸಲು ದೊರೆತ ಮುದ್ದೆ ಮಾಲಿನಲ್ಲಿ ತಲಾ 90 ಮೀ 12 ಓರಿಜಿನಲ್ ಚಾಯ್ಸು ವಿಸ್ಕಿಯ ಟೆಟ್ರಾ ಪ್ಯಾಕಗಳು, ತಲಾ 90 ಎಂ ಎಲ್ ಒಟ್ಟು 12 ಓಲ್ಡ ಟಾವೆರನ್ ಟೆಟ್ರಾ ಪ್ಯಾಕಗಳು, ತಲಾ 650 ಎಂ ಎಲ್ ಒಟ್ಟು 2 ಓಲ್ಡ ಟೋಬರ್ಗ್ ಬಿಯರ್ ಬಾಟಲಿಗಳು ಮತ್ತು ತಲಾ 330 ಮೀ 2 ನಾಕ್ ಔಟ್ ಹೈ ಪಂಚ ಬಿಯರ ಕ್ಯಾನಗಳನ್ನು ರಾಸಾಯನಿಕ ಪರೀಕ್ಷೆಗಾಗಿ ಮಾದರಿಗಾಗಿ ಸಂಗ್ರಹಿಸಿ ಅವುಗಳನ್ನು ಬಿಳಿ ಬಟ್ಟೆಯ ಚೀಲದಲ್ಲಿ ಹಾಕಿ ದಾರದಿಂದ ಹೊಲೆದು ಅರದಿಂದ ಇಲಾಖಾ ಮೊಹರು ಹಾಕಲಾಯಿತು. ಮಾದರಿ ಚೀಟಿ ಮಾದರಿ ಮೊಹರಿನ ನಕಲನ್ನು ತಯಾರಿಸಿ ಅದಕ್ಕೆ ಪಂಚರ ಮತ್ತು ನನ್ನ ಸಹಿಯನ್ನು ಹಾಕಿ ಅಂಟಿಸಿದೇನು. ಈ ಬಗ್ಗೆ ಸ್ಥಳದಲ್ಲಿ ಮದ್ಯಾಹ್ನ 12.30 ರಿಂದ 1.30 ರವರೆಗೆ ಪಂಚಾನಮೆಯ ಕ್ರಮವನ್ನು ಜರುಗಿಸಿದೇನು. ಪಂಚನಾಮೆಯನ್ನು ನಾನು ಬರೆದೇನು. ನಂತರ ಪಂಚನಾಮೆ, ಮುದ್ದೆ ಮಾಲು ರಾಸಾಯನಿಕ ಪರೀಕ್ಷೆಗಾಗಿ ಸಂಗ್ರಹಿಸಿದ ಮುದ್ದೆ ಮಾಲಿನೊಂದಿಗೆ ಕಚೇರಿಗೆ

ಬಂದೆವು. ಆರೋಪಿಯನ್ನು ನೋಡಿದರೆ ಗುರುತಿಸುತ್ತೇನೆ. ಆರೋಪಿಯು ಗೈರು ಹಾಜರಿದ್ದು ಆರೋಪಿ ಪರ ವಕೀಲರು ತಕರಾರು ಇಲ್ಲ ಎನ್ನುತ್ತಾರೆ.

ಸ್ಥಳ ಪಂಚನಾಮೆಯನ್ನು ಈಗ ನೋಡುತ್ತಿದ್ದು ಅದು ಈಗಾಗಲೇ ನಿಪಿ-1 ಎಂದು ಸಾಕ್ಷಿಯ ಸಹಿಯನ್ನು ನಿಪಿ-1 (ಡಿ) ಎಂದು ಗುರುತಿಸಲಾಯಿತು. ಸಾಕ್ಷಿ ನ್ಯಾಯಾಲಯದ ಮುಂದೆ ಇರುವ ಮುದ್ದೆ ಮಾಲನ್ನು ನೋಡಿ ಗುರುತಿಸಿದ್ದು ಒಟ್ಟಾಗಿ ಅದನ್ನು ಈಗಾಗಲೇ ಮು ಮಾ 1 ಎಂದು ಗುರುತಿಸಲಾಗಿದೆ. ಚಾಸಾ-11 ರವರು ನನ್ನ ಹೇಳಿಕೆಯನ್ನು ಪಡೆದಿರುತ್ತಾರೆ.

ಪಾಟೀ ಸವಾಲು : ಆರೋಪಿ ಪರ ಶ್ರೀ.ಪಿ.ಎಂ.ಜೆ. ವಕೀಲರಿಂದ

ಘಟನೆ ನಡೆದ ದಿನ ನಾನು ಬೆಳಿಗ್ಗೆ 10.00 ಕರ್ತವ್ಯಕ್ಕೆ ಹಾಜರಾಗಗಿದ್ದು ಸಂಜೆ 05.00 ಗಂಟೆಯವರೆಗೆ ಕತರ್ತವ್ಯ ನಿರ್ವಹಿಸಿರುತ್ತೇನೇ. ಆ ದಿನ ಗಸ್ತು ಕರ್ತವ್ಯಕ್ಕೆ ಬೆಳಿಗ್ಗೆ ಸುಮಾರು 11.45 ಗಂಟೆಗೆ ಕಚೇರಿಯಿಂದ ಹೊರಟಿದ್ದೇವು. ನಾನು ಚಾಸಾ-1, 5 ಮತ್ತು ವಾಹನ ಚಾಲಕರು ಹೊರಟಿದ್ದೇವು. ಹಾನಗಲ್ಲ ಶಹರದ ಗಸ್ತು ನಡೆಸುತ್ತಾ ಮುಂದೆ ನಡೆದೆವು. ಇಲಾಖಾ ದಿನಚರಿ ಪುಸ್ತಕದಲ್ಲಿ ಶಹರ ಗಸ್ತಿಗೆ ಹೊರಟ ಬಗ್ಗೆ ನಮೂದಿಸಿದ್ದೇನೆ. ಅದನ್ನು ತನಿಖಾಧಿಕಾರಿಗೆ ಕೊಟ್ಟಿಲ್ಲ ಅದು ಕಚೇರಿಯಲ್ಲಿ ಲಭ್ಯವಿರುತ್ತದೆ. ಆ ದಿನ ಹಾನಗಲ್ಲ ಪಟ್ಟದಣಲದಲ್ಲಿ ಗಸ್ತು ಮಾಡಿ ಮಲ್ಲಿಗಾರ ಗಸ್ತಿಗೆ ಹೊರಟಿದ್ದೆವು. ಮಾಹಿತಿ ಬಂದಾಗ ನಾವು ಮಲ್ಲಿಗಾರ ಗ್ರಾಮದ ಮುಖ್ಯ ರಸ್ತೆಯಲ್ಲಿ ಇದ್ದೇವು.

2. ನನಗೆ ನಮ್ಮ ಕಚೇರಿಯಿಂದ ಘಟನಾ ಸ್ಥಳದ ಅಂತರ ಹೇಳಲು ಬರುವುದಿಲ್ಲ. ಘಟನಾ ಸ್ಥಳ ಸಲುಪಲು 20 ನಿಮಿಷ ಬೇಕಾಗುತ್ತದೆ. ಚಾಸಾ-5 ರವರು ಪಂಚರನ್ನು ಕರೆದುಕೊಂಡು ಬಂದರು. ಚಾಸಾ-1 ರವರು ಪಂಚರಿಗೆ ಮಾಹಿತಿಯನ್ನು ನೀಡಿರುತ್ತಾರೆ. 2-3 ನಿಮಿಷದಲ್ಲಿ ಪಂಚರನ್ನು ಕರೆದುಕೊಂಡು ಬಂದರು. ಚಾಸಾ-5 ರವರು ಓಡಿ ಹೋದ ವ್ಯಕ್ತಿಯನ್ನು ಹಿಡಿಯಲು ಹೋದರು. ಶೋಧನಾ ಸಮೂಚಿತ ವರದಿಯನ್ನು 12.25 ಗಂಟೆಗೆ ತಯಾರಿಸಲಾಯಿತು. ಚಾಸಾ-5 ರವರು ಶೋಧನಾ ಸಮೂಚಿತ ವರದಿಯನ್ನು ತಯಾರಿಸಿದರು. ಬಿಳಿ ಬಣ್ಣದ ಚೀಲವನ್ನು ವಶ ಪಡಿಸಿಕೊಳ್ಳಲಾಗಿದೆ ಅದನ್ನು ಮುಂದೆ ಏನು ಮಾಡಲಾಯಿತು ಎಂಬುದು ಗೊತ್ತಿಲ್ಲ ತನಿಖಾಧಿಕಾರಿಯವರಿಗೆ ಗೊತ್ತು. ಉಳಿದ ಮುದ್ದೆ ಮಾಲನ್ನು ನಾಶ ಪಡಿಸಲಾಯಿತು.

**3.** ಘಟನಾ ಸ್ಥಳದ ಚಕ್ಕುಬಂದಿಯನ್ನು ಹೇಳಲು ಬರುತ್ತದೆ. ಪೂರ್ವಕ್ಕೆ ಕಬ್ಬಿನ ಗದ್ದೆ , ಪಶ್ಚಿಮಕ್ಕೆ ಟಿ ಜಿ ರಸ್ತೆ, ಉತ್ತರಕ್ಕೆ ಕಬ್ಬಿನ ಗದ್ದೆ ಮತ್ತು ದಕ್ಷಿಣಕ್ಕೆ ಭಾರತ್ ಪೆಟ್ರೋಲ್ ಬಂಕ್. ಪಂಚನಾಮೆಯನ್ನು **12.30** ರಿಂದ **1.30** ಗಂಟೆಯವರೆಗೆ ಮಾಡಲಾಯಿತು. ಚಾಸಾ-**1,** ಪಂಚರು ಚಾಸಾ-**5** ಮತ್ತು ನಾನು ಪಂಚನಾಮೆಗೆ ಸಹಿ ಮಾಡಿರುತ್ತೇನೆ. ಪಂಚನಾಮೆಯ ಕಾಲಕ್ಕೆ ಪೊಟೋವನ್ನು ತೆಗೆದಿರುವುದಿಲ್ಲ. ಈ ಪ್ರಕರಣಕ್ಕೂ ಆರೋಪಿಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ನಾನು ಚಾಸಾ-**1** ರವರು ಮಾತು ಕೇಳಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಈ ಮುದ್ದೆ ಮಾಲಿಗೂ ಆರೋಪಿಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ಆ ದಿನ ಯಾವುದೇ ಪಂಚನಾಮೆ ಮಾಡಿಲ್ಲ ಪಂಚರ ಸಮಕ್ಷಮ ಯಾವುದೇ ವಸ್ತು ಜಪ್ತು ಪಡಿಸಿಕೊಂಡಿಲ್ಲ ಎಂದರೆ ಸರಿಯಲ್ಲ.

: ಮರುವಿಚಾರಣೆ : ಇಲ್ಲ.

( ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ನ. ಸ. ಓ. ಹೇ. ಕೆ ಸರಿ ಇದೆ
ಎಂದು ಒಪ್ಪಿರುತ್ತಾರೆ.

**Sd/-**

ಹಿರಿಯ ಸಿವಿಲ್ ನ್ಯಾಯಾಧೀಶರು
ಹಾನಗಲ್